ದಿನಾಂಕ 29 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು :</u> ಪ್ರತಿವಾದಿ ಪರ ವಕೀಲರಿಂದಃ-

ವಾದ ಪತ್ರದ 3 ನೇ ಪುಟದ 5 ನೇ ಪ್ಯಾರದಲ್ಲಿ 4 ಅಡಿ ಅಗಲ ಹಾಗೂ 100 ಅಡಿ ಉದ್ದ ಎಂದು ನಮೂದಾಗಿದೆ ಎಂದರೆ ಸರಿ. ಅಷ್ಟು ಜಾಗ ಒತ್ತುವರಿ ಆಗಿದ್ದು ಆಯುಕ್ತರ ವರದಿಯಲ್ಲಿ ಕಡಿಮೆ ಎಂದು ಬಂದಿದೆ ಎನ್ನುತ್ತಾರೆ. ಪ್ಯಾರ 5 ರಲ್ಲಿ ಹೇಳಿದಂತೆ ಯಾವುದೇ ಒತ್ತುವರಿ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ಕಟ್ಟಿರುವ ಕಟ್ಟಡ ಅವರು ಕಿಟಕಿಯ ಮೇಲಿನ ಸಜ್ಜ ಹಾಗೂ ಮನೆಯ ಮೇಲ್ಚಾವಣಿ ಎಲ್ಲವೂ ಸಹ ಪ್ರತಿವಾದಿಯವರ ಜಾಗದಲ್ಲಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಮನೆಗೆ ಹೋಗುವ ದಾರಿ ಪ್ರತಿವಾದಿಯವರ ಜಾಗದಲ್ಲಿ ಇದೆ ಎಂದರೆ ಸರಿಯಲ್ಲ, ನಮ್ಮ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯವರು ನಮ್ಮ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮತ್ತೂರು ಗ್ರಾಮದ ಸರ್ವೆ ನಂ 62/19 ರಲ್ಲಿರುವ ಆಸ್ತಿಯನ್ನು ಪ್ರತಿವಾದಿಯವರು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ತಮ್ಮ ಆಸ್ತಿಯನ್ನು ಲಕ್ಷಮಮ್ಮ ಮತ್ತು ಇತರರಿಂದ ಖರೀದಿಸಿದ್ದಾರೆ ಎಂದರೆ ಸರಿ. ಶುದ್ದ ಕ್ರಯಪತ್ರದಂತೆ ಪ್ರತಿವಾದಿಯರು ಆಸ್ತಿ ಖರೀದಿಸಿ ಸ್ವಾದೀನದಲ್ಲಿರುವ ವಿಚಾರ ತಿಳಿದಿದ್ದರೂ ಸಹ ಒತ್ತುವರಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 01.09.2015 ರಂದು ನಾನು ಮತ್ತು ನನ್ನ ಕುಟುಂಬದವರು ಪ್ರತಿವಾದಿಯರ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ. ಪೊ ಠಾಣೆಗೆ ಪ್ರತಿವಾದಿಯವರು ದೂರು ನೀಡಿದ್ದು, ಪೊನ್ನಂಪೇಟೆ ಪೊಲೀಸರು ನಮ್ಮನ್ನು ಕರೆದು ವಿಚಾರಿಸಿದರು ಎಂದರೆ ಸರಿಯಲ್ಲ. ನಾವು ದೂರು ನೀಡಿದ್ದು ಪೊಲೀಸರು ಪ್ರತಿವಾದಿಯವರನ್ನು ಕರೆಸಿದ್ದರು ಎನ್ನುತ್ತಾರೆ.

ಪ್ರತಿವಾದಿಯವರ ಸ್ವತ್ತಿನ ಜಾಗದಲ್ಲಿ ಒಂದು ಹಳೆಯ ಮನೆ ಇದ್ದು ಹಾಗೂ ಕಾಪೌಂಡ್ ಇದೆ ಎಂದರೆ ಈಗಲೂ ಇದೆ ಎನ್ನುತ್ತಾರೆ. ಕಾಪೌಂಡ್‌ಗಿಂತ ಆಚೆ 1 ಅಡಿ ಒಳಗಡೆ ಬಂದು 2 ವರೆ ಅಡಿ ಎತ್ತರ ಹಾಗೂ 25 ಅಡಿ ಉದ್ದದ ಗೋಡೆ ಕಟ್ಟಿದ್ದಾರೆ ಎನ್ನುತ್ತಾರೆ. ಹಳೆ ಕಾಪೌಂಡ್ ಅನ್ನು ಲಕ್ಷಮಮ್ಮನವರೇ ಕಟ್ಟಿರುತ್ತಾರೆ ಎನ್ನುತ್ತಾರೆ. ನಾವೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಿದ್ದೇವೆ ಎಂದರೆ ಸರಿಯಲ್ಲ. ಎಲ್ಲ ವಿಚಾರಗಳೂ ಗೊತ್ತಿದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಆಸ್ತಿಯನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು  ಲಕ್ಷಮಮ್ಮನವರಿಂದ ಖರೀದಿಸಿದ ಜಾಗದಲ್ಲೇ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಮಗೆ ಸೇರಿದ ಆಸ್ತಿ 21 ಸೆಂಟ್ ನಮ್ಮ ಬಳಿ ಇದೆ ಎಂದರೆ ಸರಿಯಲ್ಲ, ಈಗ 17 ಸೆಂಟ್ ಜಾಗ ಮಾತ್ರ ಇದೆ  ಎನ್ನುತ್ತಾರೆ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.